


ಆಪರೇಶನ್‌ಗೆ ಸಿದ್ಧನಾಗಿ ಗೌನ್ ಧರಿಸಿದ್ದ ಗುಂಡ ಆಸ್ಪತ್ರೆಯ ಒಳಗಿಂದ ಓಡಿಬಂದು ಹೊರಗೆ ನಿಂತಿದ್ದ ಹೆಂಡತಿಯ ಬಳಿ ಹೇಳಿದ– ಬೇಗ ಇಲ್ಲಿಂದ ಹೊರಟು ಮನೆಗೆ ಹೋಗೋಣ. ನಾನು ಈ ಆಪರೇಶನ್ ಮಾಡಿಸಿಕೊಳ್ಳುವುದಿಲ್ಲ!

'ಏಕೆ.. ಏನಾಯ್ತು?' ಎಂದು ಪ್ರಶ್ನಿಸಿದಳು ಹೆಂಡತಿ.

ಗುಂಡ: ಅಲ್ಲಿ ನರ್ಸ್ ಹೇಳುತ್ತಿದ್ದಳು– ನೀವೇನೂ ಹೆದರಬೇಡಿ, ಇದೊಂದು ಸಣ್ಣ ಆಪರೇಶನ್. ಗಾಬರಿಯಾಗುವಂತದ್ದೇನೂ ಇಲ್ಲ..

ಹೆಂಡತಿ: ಸರಿ, ಆಕೆ ನಿಮ್ಮನ್ನು ಸಮಾಧಾನ ಪಡಿಸಲು ಹಾಗೆ ಹೇಳಿದ್ದಾಳೆ, ಅದರಲ್ಲೇನು ತಪ್ಪು?

ಗುಂಡ: ಆಕೆ ಹೇಳುತ್ತಿದ್ದುದು ನನಗಲ್ಲ ಡಾಕ್ಟರ್‌ಗೆ!

★★★

## ಮಾರ್ಕೆಟಿಂಗ್ ಟಿಪ್ಸ್

ಹೆಸರುವಾಸಿಯಾದ ಬಿಸಿನೆಸ್ ಸ್ಕೂಲ್‌ನಲ್ಲಿ ಗುಂಡನಿಗೆ ಉಪನ್ಯಾಸಕನ ಹುದ್ದೆ ಸಿಕ್ಕಿತು. ಮಾರ್ಕೆಟಿಂಗ್ ಬಗ್ಗೆ ಅವತ್ತು ಅವನೇ ಪಾಠ ಮಾಡಬೇಕಿತ್ತು. ವಿದ್ಯಾರ್ಥಿಗಳಿಗೆ ಉದಾಹರಣೆ ಸಮೇತ ಹೇಳಿದರೆ ಸುಲಭವಾಗಿ ಅರ್ಥವಾಗುತ್ತದೆ ಎಂದುಕೊಂಡ ಗುಂಡ ಈ ರೀತಿ ಪಾಠ ಮಾಡಿದ;

★ ಭರ್ಜರಿಯಾಗಿ ಡ್ರೆಸ್ ಹಾಕಿಕೊಂಡು ಸಕತ್ ಮಿಂಚುತ್ತಿರುವ ಸುರಸುಂದರಿಯೊಬ್ಬಳನ್ನು ಪಾರ್ಟಿಯೊಂದರಲ್ಲಿ ನೀವು ನೋಡುತ್ತೀರ, ಅವಳ ಹತ್ತಿರ ಹೋಗಿ 'ನಾನು ಬಹಳ ಶ್ರೀಮಂತ. ನನ್ನನ್ನು ಮದುವೆಯಾಗು' ಎನ್ನುವುದೇ ನೇರ ಮಾರುಕಟ್ಟೆ– ಡೈರೆಕ್ಟ್ ಮಾರ್ಕೆಟಿಂಗ್.

★ ನೀವು ಹಲವು ಗೆಳೆಯರೊಡನೆ ಪಾರ್ಟಿಯಲ್ಲಿದ್ದಾಗ ಚೆನ್ನಾಗಿ ಅಲಂಕರಿಸಿಕೊಂಡ ಸುರಸುಂದರಿಯನ್ನು ನೋಡುತ್ತೀರ. ಆಗ ನಿಮ್ಮ ಗೆಳೆಯರಲ್ಲೊಬ್ಬ ಆಕೆಯ ಬಳಿ ಹೋಗಿ ನಿಮ್ಮ ಕಡೆ ಬೆರಳು ತೋರಿಸುತ್ತಾ 'ಅವನು ತುಂಬಾ ಶ್ರೀಮಂತ, ಅವನನ್ನು ಮದುವೆಯಾಗು' ಎನ್ನುತ್ತಾನೆ. ಅದು ಜಾಹೀರಾತು -ಅಡ್ವರ್ಟೈಸ್‌ಮೆಂಟ್.

★ ನೀವು ಪಾರ್ಟಿಯೊಂದರಲ್ಲಿ ಸುರಸುಂದರಿಯನ್ನು ನೋಡುತ್ತೀರ, ಅವಳ ಬಳಿ ಹೋಗಿ ಅವಳ ಮೊಬೈಲ್ ನಂಬರ್ ಪಡೆದುಕೊಳ್ಳುತ್ತೀರ. ಮರುದಿನ ಆಕೆಗೆ ಕರೆ ಮಾಡಿ 'ನಾನು ತುಂಬಾ ಶ್ರೀಮಂತ ನನ್ನನ್ನು ಮದುವೆಯಾಗು' ಎನ್ನುವುದೇ– ಟೆಲಿಮಾರ್ಕೆಟಿಂಗ್.

★ಸುರಸುಂದರಿಯನ್ನು ಪಾರ್ಟಿಯಲ್ಲಿ ನೋಡುತ್ತೀರಿ. ಎದ್ದು ನಿಮ್ಮ ಟೈ ಸರಿಪಡಿಸಿಕೊಂಡು ಅವಳ ಬಳಿ ಸಾಗಿ ಪಾನೀಯವನ್ನು ಅವಳ ಗ್ಲಾಸಿಗೆ ಸುರಿಯುತ್ತೀರಿ, ನಿಮ್ಮ ಕಾರಿನ ಬಾಗಿಲನ್ನು ಅವಳಿಗಾಗಿ ತೆರೆಯುತ್ತೀರಿ. ಅವಳು ಅಕಸ್ಮಾತ್ ತನ್ನ ಪರ್ಸನ್ನು ಕೆಳಗೆ ಬೀಳಿಸಿಕೊಂಡರೆ ತಕ್ಷಣ ಎತ್ತಿಕೊಡುತ್ತೀರ. ಮತ್ತು ಅವಳನ್ನು ಕಾರಿನಲ್ಲಿ ತಿರುಗಾಡಿಸಿ 'ನಾನು ಬಹಳ ಧನಿಕ, ನನ್ನನ್ನು ಮದುವೆಯಾಗು' ಎಂದು ಹೇಳಿದರೆ ಅದು ಸಾರ್ವಜನಿಕ ಸಂಪರ್ಕ– ಪಬ್ಲಿಕ್ ರಿಲೇಷನ್.




★ಪಾರ್ಟಿಯೊಂದರಲ್ಲಿ ಸುರಸುಂದರಿ ನಿಮ್ಮ ಕಣ್ಣಿಗೆ ಬೀಳುತ್ತಾಳೆ. ಆಕೆಯೇ ನಿಮ್ಮ ಹತ್ತಿರ ಬಂದು 'ನೀನು ತುಂಬಾ ಶ್ರೀಮಂತನಿರುವೆ, ನನ್ನನ್ನು ಮದುವೆಯಾಗುತ್ತೀಯಾ?' ಎಂದು ಕೇಳಿದರೆ ಅದು ಬ್ರಾಂಡ್ ಮಾನ್ಯತೆ– ಬ್ರಾಂಡ್ ರೆಕಗ್ನಿಷನ್.

★ನೀವು ಪಾರ್ಟಿಯೊಂದರಲ್ಲಿ ಸಕತ್ ಮಿಂಚುತ್ತಿರುವ ಸುಂದರಿಯನ್ನು ನೋಡುವಿರಿ. ಅವಳ ಬಳಿ ಹೋಗಿ 'ನಾನು ಬಹಳ ಹಣವುಳ್ಳವನು. ನನ್ನನ್ನು ಮದುವೆಯಾಗು' ಎನ್ನುವಿರಿ. ಅವಳು ನಿಮ್ಮ ಕಪಾಳಕ್ಕೆ ರಪ್ಪೆಂದು ಬಾರಿಸಿದರೆ ಅದು– ಕಸ್ಟಮರ್ ಫೀಡ್ ಬ್ಯಾಕ್.

★ ನೀವು ಪಾರ್ಟಿಯೊಂದರಲ್ಲಿ ಸುಂದರಿಯೊಬ್ಬಳನ್ನು ನೋಡಿ ಬಳಿಗೆ ಹೋಗಿ, 'ನಾನು ಶ್ರೀಮಂತ, ನನ್ನನ್ನು ಮದುವೆಯಾಗು' ಎನ್ನುತ್ತೀರಿ. ಅವಳು ದೂರದಲ್ಲಿದ್ದ ಅವಳ ಗಂಡನನ್ನು ಕರೆದು ನಿಮಗೆ ಪರಿಚಯಿಸುತ್ತಾಳೆ. ಅದು – ಬೇಡಿಕೆ ಮತ್ತು ಪೂರೈಕೆಯ ನಡುವಿರುವ ಅಂತರ.

★ಸುರಸುಂದರಿಯನ್ನು ನೀವು ಪಾರ್ಟಿಯೊಂದರಲ್ಲಿ ನೋಡುತ್ತೀರ. ಇನ್ನೇನು ನೀವು ಅವಳ ಬಳಿ ಹೋಗಿ ಮಾತನಾಡಿಸಬೇಕು ಎನ್ನುವಷ್ಟರಲ್ಲಿ ಬೇರೊಬ್ಬ ಬಂದು ಆಕೆಗೆ 'ನಾನು ಬಹಳ ಧನಿಕ, ನನ್ನನ್ನೇ ಮದುವೆಯಾಗು' ಎನ್ನುತ್ತಾನೆ. ಅವಳು ಆತನ ಜೊತೆ ಹೋಗುತ್ತಾಳೆ. ಇದು– ನಿಮ್ಮ ಮಾರ್ಕೆಟ್ ಷೇರನ್ನು ಕಬಳಿಸುವ ಸ್ಪರ್ಧೆ.

★ನೀವು ಪಾರ್ಟಿಯೊಂದರಲ್ಲಿ ಸುರಸುಂದರಿಯ ಬಳಿ ಸಾಗಿ ಇನ್ನೇನು 'ನಾನು ಬಹಳ ಶ್ರೀಮಂತ, ನನ್ನನ್ನು ಮದುವೆಯಾಗು' ಎಂದು ಹೇಳಬೇಕೆನ್ನುವಷ್ಟರಲ್ಲಿ ನಿಮ್ಮ ಹೆಂಡತಿ ಅಲ್ಲಿಗೆ ಬಂದುಬಿಡುತ್ತಾಳೆ. ಇದು– ಹೊಸ ಮಾರ್ಕೆಟ್ ಪ್ರವೇಶಿಸಲು ಇರುವ ನಿರ್ಬಂಧ. ಅರ್ಥ ಆಯ್ತಾ? ಎಂದು ಕೇಳಿದ ಗುಂಡ.

ಹುಡುಗರು ಕೂಗಿದರು– ಮೊದಲು ಆ ಪಾರ್ಟಿ ಎಲ್ಲಿ ನಡೀತಿದೆ ಹೇಳಿ ಸಾರ್..!

ಸಂಗ್ರಹ: ವಿದ್ಯಾ ಹಾಲಭಾವಿ




ಇಂದಿನ ಹೊಸ ಸಿನಿಮಾಗಳ ವಿಚಿತ್ರ ಹೆಸರು ಯಾವ ಭಾಷೆಯದ್ದು ಎಂದು ಕಂಡು ಹಿಡಿಯಲು ಕಲಿಸುತ್ತೇವೆ.



ಈರುಳ್ಳಿ ನಾನೇ ಕತ್ತರಿಸಿಕೊಡುತ್ತೇನೆ ತಾಳೆ, ನಿನ್ನ ಕಣ್ಣಲ್ಲಿ ನೀರು ಬರದಂತೇ ನೋಡುತ್ತೇನೆಂದು ಮಾವನಿಗೆ ಮಾತು ಕೊಟ್ಟಿದ್ದೇನೆ!

'ಗಾಂಧಿ ತತ್ವ ಮುಂದುವರಿಯಲಿ



ಅಯ್ಯೋ.. ಅಯ್ಯೋ... ಅದು ನಮ್ಮ 'ಪೂಜಾ ಗಾಂಧಿ ತತ್ವ' ಅಂತ ಅಂದುಕೊಂಡು ತುಂಬಾನೆ ಖುಷಿಯಾಗಿದ್ದೆ ಕಣೋ!